ನಿಲುಗಡೆಗಳ ಮೂಲಕ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಕುಲ್ಲಡಿಗೆ ಅಂತರದಲ್ಲಿ ಸಾಕಷ್ಟು ಬಸ್ಸಿನ ಸೌಲಭ್ಯವನ್ನು ಒದಗಿಸಿರುವುದರಿಂದ, ಈ ರೀತಿ ವಿರುದ್ಧ ದಿಕ್ಕಿನ ಜೋಡಿ ರಸ್ತೆ ಮಾರ್ಗವಾಗಿ ಬಸ್ಸಿನ ಸೌಲಭ್ಯ ಒದಗಿಸುವ ಅವಶ್ಯಕತೆ ಇರುವುದಿಲ್ಲ.

ಆದಾಗ್ಯೂ ಬೆಳಗ್ಗೆ ಮತ್ತು ಸಂಜೆ ಕಛೇರಿ ವೇಳೆಯಲ್ಲಿ ಕಛೇರಿ ನೌಕರರ ಅನುಕೂಲಕ್ಕಾಗಿ ಇದೇ ಮೊಡ್ಡಬಳ್ಳಾಪುರ ಮುಖ್ಯ ರಸ್ತೆ ಮದರ್‌ಡೈರಿ ಜೋಡಿ ರಸ್ತೆ ಯಲಹಂಕ ಉಪನಗರ ವಿಧಾನಸೌಧ ಮಾರ್ಗವಾಗಿ ಈ ಕೆಳಗಿನಂತೆ ಸುತ್ತುವಳಿ ಸೇವೆ ಒದಗಿಸಲಾಗಿದೆ. ವಿವರಗಳು ಈ ಕೆಳಗಿನಂತಿರುತ್ತವೆ.

ಪುಟ್ಟೇನಹಳ್ಳಿಯಿಂದ ಕೆಂಪೇಗೌಡ ಬಸ್‌ನಿಲ್ದಾಣ	ಬೆಳಗ್ಗೆ 09.15ಕ್ಕೆ
ಮುದ್ದೇನಹಳ್ಳಿಯಿಂದ ಶಿವಾಜಿನಗರ	ಬೆಳಗ್ಗೆ 09.30ಕ್ಕೆ
ಉಚ್ಚ ನ್ಯಾಯಾಲಯದಿಂದ ಪುಟ್ಟೇನಹಳ್ಳಿ	ಸಂಜೆ 17.15ಕ್ಕೆ
ಪ್ರಧಾನ ಅಂಚೆ ಕಛೇರಿ: ವಿಧಾನಸೌಧ ಇಂದ ಪುಟ್ಟೇನಹಳ್ಳಿ	ಸಂಜೆ 17.45ಕ್ಕೆ

ಆ) ಈಗಾಗಲೇ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಯಲಹಂಕದಿಂದ ಯಶವಂತಪುರಕ್ಕೆ ಯಲಹಂಕ ಉಪನಗರದ 5:4ನೇ ಹಂತದ ಮಾರ್ಗವಾಗಿ ಮಾರ್ಗ ಸಂಖ್ಯೆ.401-ಎಫ್‌ರಲ್ಲಿ 2 ಬಸ್ಸಿನ ಸೌಲಭ್ಯವನ್ನು 18 ವಿಕಮುಖಿ ಸುತ್ತುವಳಿಗಳೊಂದಿಗೆ ಆಚರಣೆ ಮಾಡುತ್ತಿರುವುದರಿಂದ, ಈ ರೀತಿಯ ವಿರುದ್ಧ ದಿಕ್ಕಿನಲ್ಲಿ ಬಸ್ಸುಗಳನ್ನು ಆಚರಣೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಅ ಮತ್ತು ಆ ಗೆ ನೀಡಿರುವ ಉತ್ತರದ ಹಿನ್ನೆಲೆಯಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಬಿಜಾಪುರ ಜಿಲ್ಲೆಯ ಬಿಜ್ಜರಗಿ ಮತ್ತು ನಾಗಠಾಣಗಳಲ್ಲಿ 33 ಕೆ.ವಿ. ಕೊಸ ವಿದ್ಯುತ್ ಉಪಕೇಂದ್ರವನ್ನು ಪ್ರಾರಂಭಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 981(1295)

ಸದಸ್ಯರ ಹೆಸರು: ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ(ತಿಕೋಟ)

ಪ್ರಶ್ನೆ

ಅ. ಬಿಜಾಪುರ ಜಿಲ್ಲೆಯ ಬಜ್ಜರಗಿ ಮತ್ತು ನಾಗಠಾಣಗಳಲ್ಲಿ 33 ಕೆ.ವಿ. ಹೊಸ ವಿದ್ಯುತ್ ಉಪ ಕೇಂದ್ರಗಳನ್ನು ಸ್ಥಾಪಿಸಲಾಗಿದೆಯೇ?

ಆ. ಇಲ್ಲದಿದ್ದಲ್ಲಿ ತೋಟಗಾರಿಕೆಗೆ ಪ್ರಸಿದ್ಧವಾಗಿರುವ ಈ ಸ್ಥಳಗಳಲ್ಲಿ ಎರಡು ಉಪ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರವು ಕೈಗೊಂಡಿರುವಂತಹ ಮತ್ತು ಮುಂದೆ ಕೈಗೊಳ್ಳಬೇಕಾದ ಹಾಗೂ ಕೈಗೊಳ್ಳಬಹುದಾದ ಸೂಕ್ತ ಕ್ರಮಗಳೇನು?

ಇ. ಯಾವ ನಿರ್ದಿಷ್ಟ ಕಾಲ ಮಿತಿಯೊಳಗಾಗಿ ಈ ಎರಡೂ ಅವಶ್ಯಕ ವಿದ್ಯುತ್ ಉಪ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು? (ಕಾಲಮಿತಿ ತಿಳಿಸುವುದು)

ಉತ್ತರಿಸಲಿರುವ ಸಚಿವರು: ಶ್ರೀ ವೀರಕುಮಾರ ಎ ಪಾಟೀಲ್

ಉತ್ತರ

ಅ. ಇಲ್ಲ

ಆ. ಮತ್ತು ಇ. ಬಿಜಾಪುರ ಜಿಲ್ಲೆಯ ಬಜ್ಜರಗಿ ಗ್ರಾಮದಲ್ಲಿ ಒಂದು 33:11 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಈ ಪ್ರಸ್ತಾವನೆಗೆ ನಿಗಮದ ತಾಂತ್ರಿಕ ಸಮಿತಿಯು ತನ್ನ ಅನುಮೋದನೆಯನ್ನು ನೀಡಿರುತ್ತದೆ. ಈ ವಿದ್ಯುತ್ ವಿತರಣಾ ಕೇಂದ್ರದ ನಿರ್ಮಾಣಕ್ಕೆ ಬೇಕಾಗುವ ಭೂಮಿಯನ್ನು ಸ್ವಾಧೀನ ಪಡಿಸಿ ಕೊಳ್ಳುವ ಕಾರ್ಯವು ಪ್ರಗತಿಯಲ್ಲಿದೆ. ಈ ವಿದ್ಯುತ್ ವಿತರಣಾ ಕೇಂದ್ರದ ಕೆಲಸಕ್ಕೆ ಟೆಂಡರ್ ಕರೆಯಲು ಪೂರ್ವ ಭಾವಿ ಕ್ರಮಗಳನ್ನು ಕೈಗೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕೆ ಗ್ರಾಮೀಣ ವಿದ್ಯುದೀಕರಣ ನಿಗಮದಿಂದ ಆರ್ಥಿಕ ನೆರವನ್ನು ಪಡೆಯಲು ಉದ್ದೇಶಿಸಿದ್ದು, ಈ ವಿದ್ಯುತ್ ವಿತರಣಾ ಕೇಂದ್ರದ ಯೋಜನಾ ವರದಿಯನ್ನು ಗ್ರಾಮೀಣ ವಿದ್ಯುದೀಕರಣ ನಿಗಮದ ಮಂಜೂರಾತಿಗಾಗಿ ಸಲ್ಲಿಸಲಾಗಿದೆ. ಗ್ರಾಮೀಣ ವಿದ್ಯುದೀಕರಣ ನಿಗಮದಿಂದ ಆರ್ಥಿಕ ನೆರವು ದೊರೆತ ನಂತರ, ನಿರ್ಮಾಣ ಕಾರ್ಯಗಳ ಬಗ್ಗೆ ಮುಂದಿನ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ.

ನಾಗಠಾಣ ಗ್ರಾಮದಲ್ಲಿ 33 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ ಯಾವ ಪ್ರಸ್ತಾವನೆಯು ಪ್ರಸ್ತುತ ಇರುವುದಿಲ್ಲ.